Policy matters of Governmet discussed during Session period elsewhere

† ಶ್ರೀ ಎಸ್. ಶಿವಪ್ಪ (ಶ್ರವಣಬೆಳಗೊಳ).—ಮಾನ್ಯ ಸಭಾಪತಿಯವರೇ, ನಿನ್ನೆ ಮತ್ತು ಮೊನ್ನೆ ಬೆಂಗಳೂರಿನಲ್ಲಿ ಕಾಂಗ್ರೆಸ್ ಕಚೇರಿಯಲ್ಲಿ ಈ ದೇಶದ ಮುಖ್ಯಮಂತ್ರಿಗಳು ಮತ್ತು ಇನ್ನೂ ಅನೇಕ ಮಂತ್ರಿಗಳೆಲ್ಲಾ ಸೇರಿ ಈ ಶಾಸನ ಸಭೆ 21ನೇ ತಾರೀಖಿನಿಂದ ಇಲ್ಲಿ ನಡೆಯುತ್ತಾ ಇರತಕ್ಕ ಕಾಲದಲ್ಲಿ ಅವರು ಪ್ರದೇಶ ಕಾಂಗ್ರೆಸ್ ಕಚೇರಿಯಲ್ಲಿ ಕುಳಿತುಕೊಂಡು ಈ ದೇಶದ ನೀರಾವರಿ ಮತ್ತು ವ್ಯವಸಾಯದ ಬಗ್ಗೆ ಸರ್ಕಾರದ ನೀತಿಯನ್ನು ಕುರಿತು ಮುಂದೆ ಏನೇನು ಮಾಡುತ್ತಾರೆ ಎನ್ನತಕ್ಕ ಎಲ್ಲಾ ವಿಚಾರಗಳನ್ನೂ ಕೂಡ ಪ್ರಸ್ತಾಪ ಮಾಡಿ ಚರ್ಚೆ ಮಾಡಿದ್ದಾರೆ. ಶಾಸನ ಸಭೆಗೆ ಕೊಡತಕ್ಕಂಥ ವಿಷಯಗಳನ್ನೆಲ್ಲಾ ಬಿದಿಗೊತ್ತಿ ಮುಂದೆ ಇವರು ಏನು ಮಾಡುತ್ತಾರೆ ಎನ್ನುವ ವಿಚಾರವನ್ನು ಶಾಸನ ಸಭೆಗೆ ಹೇಳತಕ್ಕಂಥ ವಿಚಾರವನ್ನು ಕಾಂಗ್ರೆಸ್ ಕಚೇರಿಯಲ್ಲಿ ಹೇಳಿದ್ದಾರೆ. ಶಾಸನ ಸಭೆಯ ಚರ್ಚೆಯನ್ನು ಹಿಂದಕ್ಕೆ ಹಾಕತಕ್ಕಂಥ ಒಂದು ಕೆಲಸವನ್ನು ಮಾಡಿದ್ದಾರೆ. ಇದು ಶಾಸನ ಸಭೆಗೆ ಅವಹೇಳನ ಮಾಡಿದಂತಾಗಿದೆ. ಇವರು ನಮಗೆ ಕೊಡತಕ್ಕ ವಿಚಾರವನ್ನು ಕಾಂಗ್ರೆಸ್ ಕಚೇರಿಯಲ್ಲಿ ಚರ್ಚೆ ಮಾಡಿರುವುದು ಇವೊತ್ತು ಪತ್ರಿಕೆಗಳಲ್ಲಿ ದೊಡ್ಡದಾಗಿ ಹಾಕಿದ್ದಾರೆ. ಈಗ ಶಾಸನ ಸಭೆಯಲ್ಲಿ ಇದೇ ವಿಚಾರವನ್ನು ಚರ್ಚೆ ಮಾಡಬೇಕಾಗಿದೆ. ವ್ಯವಸಾಯದ ವಿಚಾರವಾಗಲೀ, ನೀರಾವರಿಯ ವಿಷಯವಾಗಲೀ, ಇವರು ಮುಂದೆ ಏನು ಮಾಡುತ್ತಾರೆ ಎಂಬುದನ್ನು ಕಾಂಗ್ರೆಸ್ ಕಚೇರಿಯಲ್ಲಿ ಈಗಾಗಲೇ ಹೇಳಿದ್ದಾರೆ. ಇವರು ಶಾಸನ ಸಭೆಗೆ ಅವಹೇಳನ ಮಾಡಿದಂತಾಗಿದೆ. ಈ ಸಭೆಯ ಹಕ್ಕು ಬಾಧ್ಯತೆಗೆ ಲೋಪ ಮಾಡತಕ್ಕ ವಿಚಾರವನ್ನು ಇವರು ಮಾಡಿದ್ದಾರೆ. ಇವರು ಕಾಂಗ್ರೆಸ್ ಕಚೇರಿಯಲ್ಲಿ ಚರ್ಚೆ ಮಾಡಿರತಕ್ಕ ವಿಷಯವನ್ನು ಇಲ್ಲಿ ಚರ್ಚೆ ಮಾಡಿದರೆ ಅದು ನಾಟಕೀಯವಾಗುತ್ತದೆ. ಆದ್ದರಿಂದ ಈ ವಿಷಯವನ್ನು ಹಕ್ಕುಬಾಧ್ಯತಾ ಸಮಿತಿಗೆ ಕಳುಹಿಸಬೇಕು. ಇಲ್ಲವೇ ಮಂತ್ರಿಗಳು ಕ್ಷಮಾಪಣೆಯನ್ನು ಕೇಳಬೇಕು. ಈ ಸಭೆಯ ಘನತೆಯನ್ನು ಎತ್ತಿ ಹಿಡಿಯತಕ್ಕ ಕರ್ತವ್ಯವನ್ನು ಮಾಡಬೇಕು ಎಂದು ನಾನು ತಮ್ಮಲ್ಲಿ ಪ್ರಾರ್ಥನೆ ಮಾಡುತ್ತೇನೆ.

Mr. SPEAKER.—I have heard the hon'ble Leader of Opposition. Probably according to him it is breach of privilege. The Hon'ble Leader of Opposition may give it in writing and I shall consider the matter. It does not involve any point of order.

Now the presentation of budget.

Requests to indicate dates on the question lists, etc.

Sri D. B. KALMANKAR (Aland).—Sir, previously the dates of questions and the dates of replies were used to be furnished in the list of questions and answers. But that practice has now been discontinued. From the very first day of the current sittings, I am seeing that no dates have been furnished in the questions and answers list. It is prejudicial to the interest of the hon'ble Members. The mention of dates would have facilitated the hon'ble Members to know whether their questions have been taken up for answers or not. Hence, I request the hon'ble Chair to continue the practice which was followed during the previous session.

Mr. SPEAKER.—I shall look into the matter. I shall also see whether this practice was followed previously and if so, why it has been discontinued.

ಶ್ರೀ ಸದಾಶಿವಪ್ಪ ಪಾಟೀಲ್ (ದೇವದುರ್ಗ).—ಸ್ವಾಮಿ, ನಾನು ಪ್ರಶ್ನೋತ್ತರ ಕಾಲದಲ್ಲಿ ಒಂದು ಉಪಪ್ರಶ್ನೆಯನ್ನು ಕೇಳುವ ಕಾಲಕ್ಕೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಕೊಡುತ್ತಾ,

ನಾನು ಬಹಳ ಕೋಪದಲ್ಲಿ ಇದ್ದೇನೆ, ಚಿಂಚೋಳಿ ಕ್ಷೇತ್ರವನ್ನೇ ನೋಡಿಲ್ಲ, ಯಾವುದೇ ವಿಷಯ ತಿಳಿಯದೆ ಮಾತನಾಡಬಾರದು ಎಂದು ಉತ್ತರ ಕೊಟ್ಟರು. ಯಾವುದೇ ಒಂದು ವಿಷಯವನ್ನಾಗಲೀ ತಿಳಿದುಕೊಳ್ಳಬೇಕಾದರೆ ಸಂಬಂಧಪಟ್ಟ ಊರಿಗೇ ಹೋಗಿ ತಿಳಿದುಕೊಂಡು ಬರಬೇಕಾಗಿಲ್ಲ. ನಾನು ವಿಷಯವನ್ನು ಸರಿಯಾಗಿ ತಿಳಿದುಕೊಂಡೇ ಪ್ರಶ್ನೆಯನ್ನು ಕೇಳಿದ್ದು. ನಾನು ಹೇಳಿದ್ದು ತಪ್ಪು ಇದ್ದರೆ ನಾನು ರಾಜೀನಾಮೆ ಕೊಡುತ್ತೇನೆ, ಇಲ್ಲದಿದ್ದರೆ ಮುಖ್ಯಮಂತ್ರಿಗಳು ರಾಜೀನಾಮೆ ಕೊಡಲಿ.

ಶ್ರೀ ಎಸ್. ಎಚ್. ಪುಟ್ಟರಂಗನಾಥ್ (ಬೇಲೂರು).—ನಾನು ಹೋದ ಸಲ ಕೆಲವು ಪ್ರಶ್ನೆಗಳನ್ನು ಕೇಳಿಸಿದ್ದೆ. ಅವುಗಳಿಗೆ ಉತ್ತರ ಇನ್ನೂ ಬಂದಿಲ್ಲ. ಆ ಪ್ರಶ್ನೆಗಳನ್ನು ಈ ಸಭೆಯಲ್ಲಿ ತೆಗೆದು ಕೊಳ್ಳುತ್ತಿರಾ ಎಂಬುದನ್ನು ತಿಳಿಸಬೇಕು.

Mr. SPEAKER.—The lapsed questions will not be taken up again.

Sri M. H. JAYAPRAKASH NARAYAN (Sirsi) —This is an adjourned session. How can those questions lapse?

Mr. SPEAKER.—Those questions will not come up before the House for oral answers. They will be treated as unstarred.

ಶ್ರೀ ನದಾಶಿವಪ್ಪ ಪಾಟೀಲ್.—ನನ್ನ ಪ್ರಶ್ನೆಗೆ ತಾವು ಉತ್ತರ ಕೊಡಲಿಲ್ಲ.

Mr. SPEAKER.—If the hon'ble Member has got any information which he believes to be correct, he could put a question on the basis of that information and the hon'ble Chief Minister will reply to it.

ಶ್ರೀ ಎಸ್. ಗೋಪಾಲಗೌಡ (ತೀರ್ಥಹಳ್ಳಿ).—ಸ್ವಾಮಿ, ನೆನ್ನೆ ಈ ಸಭೆಯ ಮುಂದೆ ನರೋನಾ ಆಯೋಗದ ವರದಿಯನ್ನು ಸರ್ಕಾರದವರು ಇಟ್ಟಿದ್ದಾರೆ. ಈ ಸಭೆಯಲ್ಲಿ ಇಡುವುದಕ್ಕೆ ಮೊದಲೇ ಈ ವರದಿ ಪೋಲೀಸರ ಕೈಗೆ ಸಿಕ್ಕಿದೆ ಎಂದು ತಿಳಿದಿದೆ. ಈ ವಿಚಾರದಲ್ಲಿ ರಣಭೇರಿ ಎಂಬ ಪತ್ರಿಕೆಯಲ್ಲಿ ಬಹಳವಾಗಿ ಬರೆದಿದ್ದಾರೆ. ಆ ಪತ್ರಿಕೆಯಲ್ಲಿರುವ ವಿಷಯ ಸತ್ಯವಾಗಿದೆಯೋ ಅಥವಾ ಸತ್ಯಕ್ಕೆ ದೂರವಾಗಿದೆಯೋ ಎಂಬುದು ನನಗೆ ಗೊತ್ತಿಲ್ಲ. ಈ ವಿಚಾರವನ್ನು ಈ ಪತ್ರಿಕೆಯವರು ಪ್ರಕಟ ಮಾಡಿದ್ದಕ್ಕೆ ಪೋಲೀಸರು ಹೋಗಿ ಏತಕ್ಕೆ ಇದನ್ನೆಲ್ಲಾ ಬರೆಯುತ್ತೀರಿ ಎಂದು ಕೇಳಿ ಹೆದರಿಸುತ್ತಿದ್ದಾರೆಂದು ತಿಳಿಯಿತು. ನನ್ನ ಭಾಷಣವನ್ನು ಸಹ ಈ ಪತ್ರಿಕೆಯವರು ಪ್ರಕಟ ಮಾಡಿದ್ದಾರೆ. ನರೋನಾ ಆಯೋಗದ ವರದಿಯನ್ನು ಪೋಲೀಸರು ಮೊದಲೇ ತಿಳಿದುಕೊಂಡು ಈ ಮನೆಗೆ ಅವಹೇಳನ ಮಾಡಿದ್ದಾರೆಂದು ಕಾಣಿಸುತ್ತದೆ. ಈ ಬಗ್ಗೆ ಒಂದು ನೋಟೀಸನ್ನು ತಮಗೆ ಕೊಡಬೇಕೆಂದಿದ್ದೇನೆ.

Mr. SPEAKER.—The hon'ble Member is welcome to give notice of that matter and I shall look into it.

ಶ್ರೀ ಕೆ. ಎಚ್. ರಂಗನಾಥ್ (ಮೂಡಬಿದರೆ),—ಸ್ವಾಮಿ, ಸಿ. ಐ. ಡಿ. ಇಲಾಖೆಯ ನರಸಿಂಹಮೂರ್ತಿ ಎಂಬುವವರು ಪ್ರತಿನಿತ್ಯ ತಮ್ಮ ನೋಟೀಸ್ ಆಫೀಸ್‌ನಲ್ಲಿ ಕೆಲವು ಮಾಹಿತಿಗಳನ್ನು ಆಗಾಗ್ಗೆ ಪಡೆಯುತ್ತಿರುತ್ತಾರೆ. ತಮ್ಮ ರೀಡಿಂಗ್ ರೂಮಿನಲ್ಲಿಯೂ ಸಹ ಇರುತ್ತಾರೆ. ಇವರು ತಮ್ಮ ಆಫೀಸ್‌ಗೆ ಬರಲು ತಾವು ಅನುಮತಿ ಕೊಟ್ಟಿದ್ದೀರಾ? ಅಥವಾ ಅವರನ್ನು ಅವರ ಇಲಾಖೆಯವರೇ ಕಳಿಸುತ್ತಾರೆಯೇ ಎಂಬುದನ್ನು ತಾವು ವಿಚಾರ ಮಾಡಿ ತಿಳಿಸಬೇಕು. ಶ್ರೀಮಾನ್ ಗೋಪಾಲಗೌಡರು ಈಗ ಹೇಳಿದಂತೆ ಈ ಸಭೆಗೆ ಮತ್ತು ಈ ಸಭೆಯ ಸದಸ್ಯರುಗಳಿಗೆ ಒಂದು ರೀತಿಯಲ್ಲಿ ಅವಹೇಳನವಾದಂತೆ ಆಗುತ್ತಿದೆ. ಮತ್ತು ನಾವುಗಳು ಈ ಸಭೆಗೆ ಬರುವುದೇ ಕಷ್ಟವಾಗುತ್ತಿದೆ.

Mr. SPEAKER.—I shall find out the position.